“ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ”ಯಿಂದ

ನಾಯಂಡಹಳ್ಳಿ ಮುನ್ನಡೆ ಕೇಂದ್ರದ ವಾರ್ಷಿಕೋತ್ಸವದ ಪ್ರಯುಕ್ತ

# ನಮ್ಮ ಆರೋಗ್ಯ.... ನಮ್ಮ ಹಕ್ಕು....

ಎಂಬ ವಿಚಾರದ ಬಗ್ಗೆ ಸಭೆ

**ದಿನಾಂಕ : 26-4-2009, ಭಾನುವಾರ** **ಸಮಯ: ಬೆಳಿಗ್ಗೆ 10-30ಕ್ಕೆ**

**ಸ್ಥಳ: ನಾಯಂಡಹಳ್ಳಿ ಮುನ್ನಡೆ ಕೇಂದ್ರ, ವಿನಾಯಕ ಬಡಾವಣೆ, ನಾಯಂಡಹಳ್ಳಿ, ಬೆಂಗಳೂರು-39**

ಆತ್ಮೀಯ ಸ್ನೇಹಿತರೇ,

ನಾವು ಈ ನೆಲದ ನಾಗರೀಕರಾಗಿಯೂ, ಕಾರ್ಮಿಕರಾಗಿಯೂ “ಆರೋಗ್ಯ ನಮ್ಮ ಹಕ್ಕು” ಎಂಬುದನ್ನು ತಿಳಿದುಕೊಳ್ಳುವುದು ಇಂದು ಅತ್ಯಂತ ಅವಶ್ಯಕವಾಗಿದೆ. ಕಳೆದ 30 ವರ್ಷಗಳಿಂದ ಅಂತರರಾಷ್ಟ್ರೀಯ ಮಟ್ಟದಲ್ಲಿ “ಎಲ್ಲರಿಗೂ ಆರೋಗ್ಯ-ಆರೋಗ್ಯವೆಂಬುದು ಮಾನವಹಕ್ಕು” ಎಂಬ ಘೋಷಣೆ ಕೇಳಿಬರುತ್ತಿದ್ದರೂ, ಇಂದಿಗೂ ಆರೋಗ್ಯ ನಮ್ಮ ಹಕ್ಕು ಎಂದು ನಮ್ಮನ್ನು ಆಳುವ ಸರಕಾರಗಳು ಪರಿಗಣಿಸುತ್ತಿಲ್ಲ. ಸಾಮಾನ್ಯವಾಗಿ ಅನಾರೋಗ್ಯಕ್ಕೀಡಾಗುವುದು ಒಂದು ಆಕಸ್ಮಿಕ ಅದು ಅವರವರ ದೇಹದ ತೊಂದರೆ ಎಂದು ನಾವೆಲ್ಲರೂ ತಿಳಿದುಕೊಂಡಿದ್ದೇವೆ. ಆದರೆ, ಪ್ರತಿನಿತ್ಯವೂ ನಮ್ಮ ಸುತ್ತಮುತ್ತಲ ವಾತಾವರಣ, ನಾವು ಮಾಡುವ ಕೆಲಸ, ಪಡೆಯುವ ವೇತನದಂತಹ ಅಂಶಗಳು, ನಮ್ಮ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತಲೇ ಇರುತ್ತವೆ. ಕಡೆಗೊಂದು ದಿನ ಅದು ಅನಾರೋಗ್ಯಕ್ಕೆ ತಿರುಗುತ್ತದೆ. ಆದ್ದರಿಂದ, ಇದನ್ನು ಮೊದಲಿಗೇ ಇದರ ಬಗ್ಗೆ ಅರಿತು, ತಡೆಗಟ್ಟುವ ಕ್ರಮಗಳ ಬಗ್ಗೆ ನಾವು ಸ್ವಲ್ಪವಾದರೂ ಯೋಚಿಸಲೇಬೇಕಾಗಿದೆ.

ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯು, ಗಾರ್ಮೆಂಟ್ಸ್‌ಗಳಲ್ಲಿ ದುಡಿಯುತ್ತಿರುವ ಮಹಿಳಾ ಕಾರ್ಮಿಕರನ್ನು ಅವರ ವಾಸಸ್ಥಳದಲ್ಲಿ ಸಂಘಟಿಸುತ್ತಾ, ಅವರ ಸಾಮಾಜಿಕ ಹಾಗೂ ಕೌಟುಂಬಿಕ ಸಮಸ್ಯೆಗಳಿಗೆ ಸ್ಪಂದಿಸುತ್ತಿದೆ. ಸಮುದಾಯದ ಮಟ್ಟದಲ್ಲಿ ಕೆಲಸಗಳನ್ನು ಮಾಡುವ ಉದ್ದೇಶವನ್ನು ಹೊಂದಿರುವ ಮುನ್ನಡೆಯು, ಗಾರ್ಮೆಂಟ್ಸ್ ಮಹಿಳೆಯರ ಆರೋಗ್ಯವನ್ನು ಗಂಭೀರವಾಗಿ ಪರಿಗಣಿಸಿ, ನಾಯಂಡಹಳ್ಳಿಯ ಮುನ್ನಡೆ ಕೇಂದ್ರದಲ್ಲಿ ಕಳೆದ ಒಂದು ವರ್ಷದಿಂದ ಸಮುದಾಯ ಆರೋಗ್ಯ ಕೋಶ (ಸಿಎಚ್‌ಸಿ) ಸಂಸ್ಥೆಯ ಬೆಂಬಲದಿಂದ ಮುನ್ನಡೆಯು ಕಾರ್ಮಿಕರಿಗೆ ಉಚಿತ ವೈದ್ಯಕೀಯ ಕ್ಲಿನಿಕ್ ಅನ್ನು ಆಯೋಜಿಸುತ್ತಿದೆ. ಆದರೆ, ಕಾರ್ಮಿಕರ ಆರೋಗ್ಯ ರಕ್ಷಣೆಗೆ ಈ ಉಚಿತ ತಪಾಸಣೆಯಷ್ಟೇ ಸಾಲದು ಮತ್ತೂ ಹಲವಾರು ರೀತಿಯಲ್ಲಿ ಕೆಲಸಗಳು ಆಗಬೇಕು ಎಂದು ಮುನ್ನಡೆ ಬಲವಾಗಿ ನಂಬಿದೆ ಮತ್ತು ಅದಕ್ಕಾಗಿ ಹಲವಾರು ಚಿಂತನೆಗಳನ್ನೂ ನಡೆಸಿದೆ.

ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯು, ನಾಯಂಡಹಳ್ಳಿಯಲ್ಲಿ **ಮುನ್ನಡೆ ಕೇಂದ್ರವನ್ನು** ತೆರೆದು ಒಂದು ವರ್ಷ ಪೂರೈಸಿದೆ. ಇದರ ವಾರ್ಷಿಕೋತ್ಸವದ ಅಂಗವಾಗಿ, ದಿನಾಂಕ **26-4-2009 ರಂದು ಭಾನುವಾರ,** ಆರೋಗ್ಯದ ಬಗ್ಗೆ ಕೆಲಸ ಮಾಡಲು, ನಮ್ಮನ್ನು ಬೆಂಬಲಿಸುತ್ತಿರುವ ಸಿ.ಎಚ್.ಸಿ ಸಂಸ್ಥೆಗೆ ಸಣ್ಣದೊಂದು ಅಭಿನಂದನಾ ಕಾರ್ಯಕ್ರಮವನ್ನು ಆಯೋಜಿಸಿ, ಜೊತೆಗೆ, **“ನಮ್ಮ ಆರೋಗ್ಯ ನಮ್ಮ ಹಕ್ಕು”** ಎಂಬ ವಿಷಯದ ಬಗ್ಗೆ ಸಭೆಯನ್ನು ಹಮ್ಮಿಕೊಂಡಿದ್ದೇವೆ. ಈ ಮೂಲಕ, ಮುನ್ನಡೆಯ ಒಂದು ಮುಖ್ಯ ಉದ್ದೇಶವನ್ನು ಎತ್ತಿ ಹಿಡಿಯುತ್ತಿದ್ದೇವೆ.

## ದಯವಿಟ್ಟು ಎಲ್ಲರೂ ಬನ್ನಿ ......ಭಾಗವಹಿಸಿ........

ತಮ್ಮ ವಿಶ್ವಾಸಿಗಳು,

| | | | | |
|---|---|---|---|---|
| ಯಮುನಾ | ಸರೋಜಾ | ರತ್ನಮ್ಮ | ಲಲಿತಾ | ಶಿವಮ್ಮ |
| ಅಧ್ಯಕ್ಷರು | ಉಪಾಧ್ಯಕ್ಷರು, | ಪ್ರಧಾನ ಕಾರ್ಯದರ್ಶಿ, | ಖಜಾಂಚಿ | ಸಂಘಟನಾ ಕಾರ್ಯದರ್ಶಿ |

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:

ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ

ನಂ. 8/3, ಶ್ರೀ ಮಾತಾ ನಿಲಯ, ನ್ಯೂ ಟಿಂಬರ್‌ಯಾರ್ಡ್ ಲೇಔಟ್, ಮೈಸೂರು ರಸ್ತೆ, ಬೆಂಗಳೂರು-560 026. ದೂರವಾಣಿ: 26751320

ನಂ 53, ವಿನಾಯಕ ಬಡಾವಣೆ, ನಾಯಂಡಹಳ್ಳಿ, ಬೆಂಗಳೂರು-560 039 ಮೊ: 9739200749, 9741863687